# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

# Akkamahadevi Women's University, Vijayapura

ಕುಲಸಚಿವರು (ಮೌಲ್ಯಮಾಪನ) Registrar (Evaluation)

ಜ್ಞಾನಶಕ್ತಿ ಆವರಣ ಅಥಣಿ ರಸ್ತೆ, JnanaShakti Campus Athani Road,

ವಿಜಯಪುರ -586108 Vijayapura-586108

Phone Number: 08352-229023 Fax Number 08352-229123


ಕ್ರ.ಸಂಖ್ಯೆ:ಅಮವಿವಿ/ಪರೀಕ್ಷಾ/ಬಿ.ಎಡ್/ಥೇರಿ/2017-18/5785 ದಿನಾಂಕ: 19.01.2018.

## ಅಧಿಸೂಚನೆ

ವಿಷಯ:2018 ಜನೇವರಿ/ಫೆಬ್ರವರಿ ತಿಂಗಳಲ್ಲಿ ಬಿ.ಎಡ್. ದ್ವಿತೀಯ ಹಾಗೂ ನಾಲ್ಕನೇ ಸೆಮಿಸ್ಟರ್ ಥೇರಿ ಪರೀಕ್ಷೆ ಜರುಗಿಸುವ ಕುರಿತು.

ಉಲ್ಲೇಖ:ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:19.01.2018

2018 ಜನೇವರಿ/ಫೆಬ್ರವರಿ ತಿಂಗಳಲ್ಲಿ ಜರುಗುವ ಬಿ.ಎಡ್ ಪರೀಕ್ಷೆಗೆ ಅರ್ಜಿಗಳನ್ನು **ದಿನಾಂಕ: 20.01.2018** ರಿಂದ ಆನ್‌ಲೈನ್ ಮೂಲಕ ಸ್ವೀಕರಿಸುವ ಹಾಗೂ ಪರೀಕ್ಷೆ ಪ್ರಾರಂಭವಾಗುವ ದಿನಾಂಕದ ಇತರ ವಿವರಗಳನ್ನು ತೋರಿಸುವ ಪಟ್ಟಿ.

| ಪರೀಕ್ಷೆ | ಪರೀಕ್ಷಾ ಶುಲ್ಕಗಳ ವಿವರ | ವಿದ್ಯಾರ್ಥಿನಿಯರು ಕಾಲೇಜಿನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬೇಕಾದ ಅಂತಿಮ ದಿನಾಂಕ | | ಪ್ರಾಂಶುಪಾಲರು ಪರೀಕ್ಷಾ ಅರ್ಜಿಗಳ ಯಾದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಅಂತಿಮ ದಿನಾಂಕ | ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | |
|---|---|---|---|---|---|---|
| ಬಿ.ಎಡ್ II Sem | ಪರೀಕ್ಷಾ ಶುಲ್ಕ- 770/- ಅಂಕಪಟ್ಟಿ ಶುಲ್ಕ -180/- ಒಟ್ಟು ಶುಲ್ಕ - 950/- (ರಿಪೀಟರ್ಸ್ ವಿದ್ಯಾರ್ಥಿನಿಯರಿಗೆ ಒಂದು ವಿಷಯಕ್ಕೆ ಶುಲ್ಕ ರೂ.120/-) | ದಂಡ ಶುಲ್ಕವಿಲ್ಲದೆ | ರೂ. 100/- ದಂಡ ಶುಲ್ಕ ಸಹಿತ | --- | ವಾರ್ಷಿಕ ಪ್ರಾಯೋಗಿಕ ಪರೀಕ್ಷೆ | ಲಿಖಿತ ಪರೀಕ್ಷೆ |
| ಬಿ.ಎಡ್ IV Sem | ಪರೀಕ್ಷಾ ಶುಲ್ಕ- 770/- ಅಂಕಪಟ್ಟಿ ಶುಲ್ಕ -180/- ತೇರ್ಗಡೆ ಪ್ರಮಾಣ ಪತ್ರ ಶುಲ್ಕ ರೂ. 180/- ಘಟಿಕೋತ್ಸವ ಪ್ರಮಾಣ ಪತ್ರ - 1000/- ಒಟ್ಟು- **2130** | 30.01.18 | 05.02.18 | 10.02.18 | 29.01.18 To 06.02.18 | 19.02.18 ರಿಂದ ಪ್ರಾರಂಭ |

1. ಪರೀಕ್ಷಾ ಒಟ್ಟು ಶುಲ್ಕ ಹಾಗೂ ಇತರ ಶುಲ್ಕಗಳನ್ನು ಹೊರತು ಪಡಿಸಿ ಪ್ರತಿ ವಿದ್ಯಾರ್ಥಿನಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಹಾರ್ಡ್‌ಕಾಪಿಗಳನ್ನು ಸಂಬಂಧಪಟ್ಟ ಕಾಲೇಜಿಗಳಿಗೆ ಸಲ್ಲಿಸುವಾಗ ಪ್ರತಿ ವಿದ್ಯಾರ್ಥಿನಿಯು ರೂ.20/- ಗಳನ್ನು ಕಾಲೇಜಿಗೆ ಪಾವತಿಸಬೇಕು. ಕಾಲೇಜಿನ ಪ್ರಾಚಾರ್ಯರು ರೂ.20/- ಗಳನ್ನು ಪರೀಕ್ಷಾ ಸಾದಿಲ್ವಾರು ವೆಚ್ಚವಾಗಿ ಬಳಸಿಕೊಳ್ಳಲು ತಿಳಸಲಾಗಿದೆ.

a) ಪ್ರಾಂಶುಪಾಲರು, ತಮ್ಮ ಕಛೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದಾಗಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡುವಂತೆ ಕೋರಲಾಗಿದೆ.

b) 2015–16 ನೇ ಸಾಲಿಗೆ ಪ್ರವೇಶ ಪಡೆದು ಪ್ರಥಮ ಹಾಗೂ ದ್ವಿತಿಯ ಸೆಮಿಸ್ಟರ್ ಎರಡೂ ಪರೀಕ್ಷೆಗೆ ಗೈರುಹಾಜರಾದವರು ಮುಂಬರುವ ಪರೀಕ್ಷೆಗಳಿಗೆ ಪರೀಕ್ಷಾ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

c) ಎರಡಕ್ಕಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣರಾದರೆ ಪೂರ್ತಿ ಶುಲ್ಕ ಭರಿಸಬೇಕು.

V.ಪರೀಕ್ಷೆಗೆ ಹಾಜರಾಗಬಯಸುವ ವಿದ್ಯಾರ್ಥಿನಿಯರಿಗೆ ಸೂಚನೆಗಳು:

1. ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶವಿರುವದಿಲ್ಲ.
2. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸಲಾಗುವದಿಲ್ಲ.
3. ವಿದ್ಯಾರ್ಥಿನಿಯರ ಪರೀಕ್ಷಾ ಯಾದಿಯನ್ನು ವಿಶ್ವವಿದ್ಯಾಲಯಕ್ಕೆ ಪ್ರಾಂಶುಪಾಲರ ಮುಖಾಂತರವೇ ಸಲ್ಲಿಸತಕ್ಕದ್ದು.
4. ವಿದ್ಯಾರ್ಥಿನಿಯರು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ ಇಲ್ಲವೇ ಕನ್ನಡ ಮಾಧ್ಯಮದಲ್ಲಿ ಬರೆಯಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವದಿಲ್ಲ.ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿನಿಯರ ಉತ್ತರ ಪತ್ರಿಕೆಯ ಮೌಲ್ಯಮಾಪನವನ್ನು ತಡೆಹಿಡಿಯಲಾಗುವದು.
5. ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಲ್ಪಟ್ಟಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆ ಯಾಗುವದಿಲ್ಲ.
6. ಪರೀಕ್ಷಾ ಶುಲ್ಕವನ್ನು ಒಮ್ಮೆ ಪಾವತಿ ಮಾಡಿದ ನಂತರ ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಮರು ಪಾವತಿ ಮಾಡಲಾಗುವದಿಲ್ಲ.

19/1

**ಕುಲಸಚಿವರು (ಮೌಲ್ಯಮಾಪನ)**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

ಪ್ರತಿ:
1. ಪ್ರಾಂಶುಪಾಲರು ಎಲ್ಲ ಸಂಲಗ್ನತೆ ಹೊಂದಿದ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳು.
2. ವಿತ್ತಾಧಿಕಾರಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದಾನ್ಯಿಲಯ, ವಿಜಯಪುರ.
3. ವಿಶ್ವವಿದ್ಯಾಲಯದ ಎಲ್ಲ ಉಪಕುಲಸಚಿವರುಗಳು: ಸಹಾಯಕ ಕುಲಸಚಿವರುಗಳು ಮತ್ತು ಪರೀಕ್ಷಾ ವಿಭಾಗದ ಎಲ್ಲ ಸಿಬ್ಬಂದಿಗಳಿಗೆ.
4. ಕುಲಪತಿಳ ಆಪ್ತ ಕಾರ್ಯದರ್ಶಿಗಳು/ ಕುಲಸಚಿವರು (ಮೌಲ್ಯಮಾಪನ) ಅವರ ಆಪ್ತ ಸಹಾಯಕರು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
5. ಕಛೇರಿ ಕಡತಕ್ಕೆ .